2010–11ನೇ ಸಾಲಿನಲ್ಲಿ 1,510 ಮೆ.ವ್ಯಾ. ನಷ್ಟು ಹಾಗೂ 2011–12ನೇಸಾಲಿನಲ್ಲಿ 335 ಮೆ.ವ್ಯಾ. ನಷ್ಟು ಹೆಚ್ಚುವರಿಯಾಗಿ ಸೇರ್ಪಡೆ ಗೊಳಿಸಲು ಗುರಿ ಹೊಂದಲಾಗಿದೆ.

ಮುಂದಿನ 5 ವರ್ಷಗಳಲ್ಲಿ ರಾಜ್ಯವು ವಿದ್ಯುತ್ ಉತ್ಪಾದನೆಯ ವಿಷಯದಲ್ಲಿ ಸಂಪೂರ್ಣ ರೀತಿಯಲ್ಲಿ ಸ್ವಾವಲಂಬನೆಯನ್ನು ಸಾಧಿಸುವ ಮಹತ್ವಾಕಾಂಕ್ಷೆಯನ್ನು ಹೊಂದಿದೆ.

**849 ಶ್ರೀ ಜಾರ್ಜ್ ಕೆ.ಜೆ. (ಸರ್ವಜ್ಞನಗರ)** : ಮಾನ್ಯ ವಯಸ್ಕರ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ವಜ್ಞನಗರ ಮತಕ್ಷೇತ್ರದ ಬಾಣಸವಾಡಿಯಲ್ಲಿ ನಿರ್ಮಿಸಲಾಗುತ್ತಿರುವ ಸಾರ್ವಜನಿಕ ಗ್ರಂಥಾಲಯ ಕಟ್ಟಡದ ಕಾಮಗಾರಿಯು ತಡವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಕಟ್ಟಡವನ್ನು ಪೂರ್ಣಗೊಳಿಸುವಲ್ಲಿ ಎದುರಾಗಿರುವ ಸಮಸ್ಯೆಗಳೇನು?

ಇ) ಈ ಕಟ್ಟಡವನ್ನು ಪೂರ್ಣಗೊಳಿಸಲು ಹಾಗೂ ಸಾರ್ವಜನಿಕರಿಗೆ ಬಳಕೆಮಾಡಿಕೊಳ್ಳಲು ಬೇಕಾದ ಅವಧಿ.

**ಶ್ರೀ ಶಿವನಗೌಡ ನಾಯಕ್ (ವಯಸ್ಕರ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು)** :

ಅ) ಬಂದಿದೆ

ಆ) ಪರಿಷ್ಕೃತ ಅಂದಾಜು ಪಟ್ಟಿಯಲ್ಲಿ ಅಂದಾಜು ವೆಚ್ಚವು ಮೂಲ ಅಂದಾಜುಪಟ್ಟಿಗಿಂತ ಶೇಕಡ 108.07 ಹೆಚ್ಚುವರಿಯಾಗಿತ್ತು.

ಇ) 4 ತಿಂಗಳಲ್ಲಿ

**160 ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ)** : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 5 ಮಕ್ಕಳಿಗಿಂತ ಕಡಿಮೆ ವಿದ್ಯಾರ್ಥಿಗಳಿರುವ ಶಾಲೆಗಳನ್ನು ಮುಚ್ಚುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ರಾಜ್ಯದಲ್ಲಿ ಇಂತಹ ಶಾಲೆಗಳ ಸಂಖ್ಯೆ ಎಷ್ಟು ಹಾಗೂ ಮಾಗಡಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಇಂತಹ ಶಾಲೆಗಳ ವಿವರ ನೀಡುವುದು?

**ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :**

ಅ) ಹೌದು

ಆ) ರಾಜ್ಯದಲ್ಲಿ 485 ಶಾಲೆಗಳು 5 ಕ್ಕಿಂತ ಕಡಿಮೆ ಮಕ್ಕಳನ್ನು ಹೊಂದಿದ್ದು, ಅವುಗಳನ್ನು 2009–10ನೇ ಸಾಲಿನಿಂದ ಮುಚ್ಚಲು ಕ್ರಮ ಕೈಗೊಳ್ಳಲಾಗಿದೆ.

ಮಾಗಡಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಇಂತಹ 20 ಶಾಲೆಗಳು ಇದ್ದು, ಅವುಗಳಲ್ಲಿ 13 ಶಾಲೆಗಳನ್ನು ಮುಚ್ಚಲಾಗಿದೆ.

ಮಾಗಡಿ ಕ್ಷೇತ್ರದಲ್ಲಿ 5ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿದ್ದು ಮುಚ್ಚಿರುವ ಶಾಲೆಗಳು

1. GLPS ತಿಮ್ಮಸಂದ್ರ, ಮಾಗಡಿ
2. GLPS ದುಬ್ಬಘಟ್ಟ, ಮಾಗಡಿ
3. GLPS ಹೊಸಹಳ್ಳಿಪಾಳ್ಯ, ಮಾಗಡಿ
4. GLPS ಅಂಕನ ಪಾಳ್ಯ, ಮಾಗಡಿ
5. GLPS ಬಸವಪಟ್ಟಣ, ಮಾಗಡಿ
6. GLPS ವಲಗೇರೆಪಾಳ್ಯ, ಮಾಗಡಿ
7. GLPS ಬಸವನಗುಡಿ ಪಾಳ್ಯ, ಮಾಗಡಿ
8. GLPS ನಾಗಬಾವಿ ದೊಡ್ಡಿ, ಮಾಗಡಿ
9. GLPS ತಿಮ್ಮೇಗೌಡನಪಾಳ್ಯ, ಮಾಗಡಿ
10. GLPS ಗುಡೇಪಾಳ್ಯ, ಮಾಗಡಿ
11. GLPS ಹೊಸಪಾಳ್ಯ, ಮಾಗಡಿ
12. ULPS ಕೆ.ಕೆ. ಪಾಳ್ಯ, ಮಾಗಡಿ
13. GLPS ಕರಗದಹಳ್ಳಿ, ಮಾಗಡಿ

ಮುಂದುವರಿಸಿರುವ ಶಾಲೆಗಳು

1. ULPS ಹಳೆಲಾಯ, ಮಾಗಡಿ
2. GLPS ಕಾಡುರಾಮನಹಳ್ಳಿ, ಮಾಗಡಿ
3. ULPS ಎಸ್.ಎಸ್. ಪಾಳ್ಯ, ಮಾಗಡಿ
4. GLPS ತೇರನಪಾಳ್ಯ, ಮಾಗಡಿ
5. GLPS ಕಾಮಸಾಗರ, ಮಾಗಡಿ
6. GHPS ರಸ್ತೆಪಾಳ್ಯ, ಮಾಗಡಿ
7. GLPS ನೇರಳೆಮರದದೊಡ್ಡಿ, ಮಾಗಡಿ

ಉಳಿದಂತೆ 7 ಶಾಲೆಗಳಲ್ಲಿ ಹಾಜರಾತಿ ಹೆಚ್ಚಾಗಿದ್ದು, ಸದರಿ ಶಾಲೆಗಳನ್ನು ಮುಂದುವರಿಸಲಾಗಿದೆ.

**161 ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ)** : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ಕ್ಷೇತ್ರದ ಪದವಿ ಪೂರ್ವ ಕಾಲೇಜಿಗೆ ಬೇಕಾಗಿರುವ ಕೊಠಡಿಗಳ ಸಂಖ್ಯೆ ಎಷ್ಟು; ಈಗ ಬೋಧನೆಗೆ ಯೋಗ್ಯವಿರುವ ಕೊಠಡಿಗಳ ಸಂಖ್ಯೆ ಎಷ್ಟು;

ಆ) ಈ ಕಾಲೇಜಿಗೆ ಬೇಕಾಗಿರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯ ವಿವರ ಹಾಗೂ ಪ್ರಸಕ್ತ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರ ನೀಡುವುದು;

ಇ) ಈ ಕೊರತೆಯಿರುವ ಕಟ್ಟಡ ಹಾಗೂ ಸಿಬ್ಬಂದಿಯನ್ನು ಪೂರೈಸುವಲ್ಲಿ ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ; ಹಾಗೂ ಎಷ್ಟು ದಿನಗಳಲ್ಲಿ ಪೂರ್ಣಗೊಳಿಸಲಾಗುವುದು?

**ಎಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)** :

ಅ) ಮಾಗಡಿ ಕ್ಷೇತ್ರದಲ್ಲಿ ಒಟ್ಟು 08 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿದ್ದು, ಸದರಿ ಪದವಿ ಪೂರ್ವ ಕಾಲೇಜುಗಳಿಗೆ ಒಟ್ಟು 40 ಕೊಠಡಿಗಳು ಬೇಕಾಗಿರುತ್ತದೆ.